ಶ್ರೀ ಎಂ. ಮಹದೇಶ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯಲ್ಲಿದ್ದ ಮೆ: ತುಂಗಭದ್ರಾ ಸಕ್ಕರೆ ಕಾರ್ಖಾನೆ (ದೇವಿ ಸಕ್ಕರೆ ಕಾರ್ಖಾನೆ) ಒಂದು ಖಾಸಗಿ ಕಾರ್ಖಾನೆಯಾಗಿದ್ದು, ತನ್ನದೇ ಆದ ಆಡಳಿತಾತ್ಮಕ ಮತ್ತು ಆರ್ಥಿಕ ಕಾರಣಗಳಿಗಾಗಿ ಮುಚ್ಚಿ ಹೋಗಿತ್ತು. ತದನಂತರ ಸದರಿ ಕಾರ್ಖಾನೆಯಲ್ಲಿ ಮೇಲ್ಕಂಡ ಕಾರಣಗಳಿಂದಾಗಿ ಕಬ್ಬಿನ ಬೆಳೆಗಾರರಿಗೆ ಮತ್ತು ಕಾರ್ಖಾನೆಯ ನೌಕರರಿಗೆ ತೊಂದರೆಗಳು ಉಂಟಾದಾಗ 1999ರಲ್ಲಿ ಸದರಿ ಕಾರ್ಖಾನೆಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಉದ್ದೇಶದಿಂದ ಮೊದಲಿಗೆ ಆದ್ಯಾದೇಶವನ್ನು ಹೊರಡಿಸಿ, ನಂತರ ಅದನ್ನು ಕಾಯ್ದೆಯಾಗಿ ಪರಿವರ್ತಿಸಲಾಗಿತ್ತು. ಈ ನಡುವೆ ಸದರಿ ಕಾರ್ಖಾನೆಗೆ ತಾವು ಕೊಟ್ಟ ಸಾಲ ವಸೂಲಿಗಾಗಿ ಚೆನ್ನೈ ಮೂಲದವರು ಮಾನ್ಯ ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ಸದರಿ ಕಾರ್ಖಾನೆಯ ಸಮಾಪನಾ ಪ್ರಕರಣವನ್ನು ಹೂಡಿ, ಕಾರ್ಖಾನೆಯ ಸಮಾಪನೆಗೆ ನ್ಯಾಯಾಲಯದಿಂದ ಆದೇಶವಾಗಿದ್ದು, ಈಗ ಸದ್ಯ ಕಾರ್ಖಾನೆಯ ಆಸ್ತಿಗಳು ಸಮಾಪನಾಧಿಕಾರಿಯುವರ (ಲಿಕ್ವಿಡೇಟರ್) ಸುಪರ್ದಿನಲ್ಲಿವೆ. ಸಮಾಪನಾ ಕಾರ್ಯ ನಡೆದಿದ್ದು, ಅಧಿಕೃತ ಸಮಾಪನಾಧಿಕಾರಿಗಳಲ್ಲಿ ಸರ್ಕಾರಕ್ಕೆ ಬರಬೇಕಾದ ವಿವಿಧ ಇಲಾಖೆಗಳ ಬಾಕಿ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಕ್ಲೇಮ್ ಸಲ್ಲಿಸಲು ಸರ್ಕಾರದ ಹಂತದಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ. ಅಷ್ಟೇ ಅಲ್ಲದೆ, ಕಾರ್ಖಾನೆಯ ಆರ್ಥಿಕ ಋಣ ಮತ್ತು ದಾಯಿತ್ವ (ಲಯಬಿಲಿಟೀಸ್ ಮತ್ತು ರೆಸ್ಪಾನ್ಸಿಬಿಲಿಟೀಸ್) ಸುಮಾರು ರೂ. 52.72 ಕೋಟಿಯಷ್ಟು ಇದ್ದು ಆಸ್ತಿಯು ಕೇವಲ ರೂ. 29.45 ಕೋಟಿ ಮಾತ್ರ ಇರುವುದನ್ನು ಗಮನಿಸಿ, ಸರ್ಕಾರದ ಹಂತದಲ್ಲಿ ವಿಷಯವನ್ನು ವಿವರವಾಗಿ ಪರಿಶೀಲಿಸಿ, ಈ ಕಾರ್ಖಾನೆಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಪ್ರಸ್ತಾವನೆಯನ್ನು ಕೈಬಿಡಲಾಗಿದೆ ಮತ್ತು ಅದಕ್ಕಾಗಿ ರೂಪಿಸಿದ ಕಾಯ್ದೆಯನ್ನು ನಿರಸನಗೊಳಿಸಲಾಗಿದೆ. ಆದ್ದರಿಂದ ಈಗ ಈ ಕಾರ್ಖಾನೆಯನ್ನು ಸರ್ಕಾರದ ವತಿಯಿಂದ ಪುನರ್ ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶಿವಮೊಗ್ಗ ನಗರದ ಗಾಂಧಿಪಾರ್ಕಿನಲ್ಲಿ ಅಂಬೇಡ್ಕರ್ ಭವನದ ಕಾಮಗಾರಿ

587(384) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದ ಗಾಂಧಿ ಪಾರ್ಕಿನಲ್ಲಿ ಅಂಬೇಡ್ಕರ್ ಭವನದ ನಿರ್ಮಾಣ ಯೋಜನೆ ಯಾವ ಹಂತದಲ್ಲಿದೆ?

ಆ) ಇದುವರೆಗೆ ಸರ್ಕಾರದ ವತಿಯಿಂದ ಹಾಗೂ ಇತರೆ ಇಲಾಖೆ ವತಿಯಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿರುತ್ತದೆ?

ಇ) ಈ ಪೈಕಿ ಎಷ್ಟು ಹಣ ವಿಚ್ರ್ಯಾಗಿರುತ್ತದೆ?

ಈ) 3-4 ವರ್ಷಗಳಿಂದ ಕಾಮಗಾರಿ ಅಪೂರ್ಣಗೊಂಡು ನೆನೆಗುದಿಗೆ ಬಿದ್ದಿರುವ ಕಾರಣವನ್ನು ತಿಳಿಸುವುದು; ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 1ನೇ ಮಹಡಿಯ ಕಾಮಗಾರಿ ಕೆಲಸ ಮೇಲ್ಛಾವಣಿಯ ಮಟ್ಟಕ್ಕೆ ಬಂದಿದೆ.

ಆ) 1) ಸರ್ಕಾರದ ವತಿಯಿಂದ - ರೂ. 5.00

2) ಇತರೆ ಮೂಲಗಳಿಂದ ಸ್ಥಳೀಯವಾಗಿ - ರೂ. 52.05

ಒಟ್ಟು - ರೂ. 57.05 ಲಕ್ಷ

ಇ) ರೂ. 38.00 ಲಕ್ಷ ಹಣ ಖರ್ಚಾಗಿರುತ್ತದೆ

ಈ) ಕೆಲವು ನ್ಯೂನತೆಗಳಿಂದ ಕಾಮಗಾರಿ ಕೆಲಸ ಸ್ಥಗಿತಗೊಂಡಿತ್ತು. ನ್ಯೂನತೆಗಳನ್ನು ಸರಿಪಡಿಸಿಲು ಪ್ರೊಫೆಸರ್. ಆರ್. ಜಗದೀಶ್, ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರು, ಬೆಂಗಳೂರು ವಿಶ್ವವಿದ್ಯಾನಿಲಯ, ಇವರ ನೇತೃತ್ವದಲ್ಲಿ ನೇಮಿಸಲಾಗಿದ್ದ ತಾಂತ್ರಿಕ ಸಮಿತಿ ವರದಿಯ ಅನುಸಾರ ನ್ಯೂನತೆ ಸರಿಪಡಿಸುವ ಹಾಗೂ ಜೀರ್ಣೋದ್ಧಾರ ಕಾರ್ಯ ಪ್ರಾರಂಭವಾಗಿದ್ದು ಕೆಲಸ ಪ್ರಗತಿಯಲ್ಲಿದೆ. ನ್ಯೂನತೆಯ ದುರಸ್ತಿ ಹಾಗೂ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶಿವಮೊಗ್ಗ ಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸ ಪಶು ಚಿಕಿತ್ಸಾ ಕೇಂದ್ರ ತೆರೆಯುವುದು

588(386) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿನ ಜಾನುವಾರು ಸಂಖ್ಯೆಗಳಿಗನುಗುಣವಾಗಿ ಪಶು ಚಿಕಿತ್ಸಾಲಯಗಳನ್ನು ಒದಗಿಸಲಾಗಿದೆಯೇ:- ಶಿವಮೊಗ್ಗ ನಗರದ ವಿನೋಬನಗರ, ಗೋಪಾಳ, ಕಾಶೀಪುರ, ವಿದ್ಯಾನಗರ, ಮಿಳಘಟ್ಟಿ ಇಲ್ಲಿ ಹೊಸದಾಗಿ ಪಶು ಚಿಕಿತ್ಸಾಲಯಗಳನ್ನು ತೆರೆಯಲು ಮಂಜೂರಾತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ವಿವರ ತಿಳಿಸುವುದು.

ಆ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ವರ್ಷ ಪಶು ಚಿಕಿತ್ಸೆಗಾಗಿ ಔಷಧಿಗಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ; ವಿವರ ತಿಳಿಸುವುದು.

ಇ) ಸರ್ಕಾರದ ಕುಕ್ಕುಟ ಮಂಡಳಿ ವತಿಯಿಂದ ಶಿವಮೊಗ್ಗ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ಕೋಳಿ ಸಾಕಾಣಿಕೆಗೆ ಎಷ್ಟು ಫಲಾನುಭವಿಗಳಿಗೆ ಸಹಾಯಧನ ಮಂಜೂರು ಮಾಡಲಾಗಿದೆ. ಮಂಜೂರು ಮಾಡಿದ ಹಣ ಎಷ್ಟು? (ವಿವರ ತಿಳಿಸುವುದು)

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಹೌದು, ಪ್ರಸ್ತುತ ಹೊಸ ಪಶು ಚಿಕಿತ್ಸಾಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.